ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES, BANGALORE
ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು
ICAR - KRISHI VIGYAN KENDRA, KONEHALLI, TIPTUR TQ, TUMAKURU

ಕಲ್ಪವೃಕ್ಷ

e - NEWS LETTER /ಇ –ವಾರ್ತಾ ಪತ್ರಿಕೆ

ಸಂಪುಟ: 10 ಜನವರಿ– ಮಾರ್ಚ್ 2024 ಸಂಚಿಕೆ: 1

## ತೆಂಗಿನ ತೋಟದಲ್ಲಿ ತೇವಾಂಶವನ್ನು ರಕ್ಷಿಸಿ



ಸುಡು ಬಿಸಿಲು ಹೆಚ್ಚಾಗಿದ್ದು, ತೆಂಗಿನ ತೋಟದಲ್ಲಿ ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಮಾಡುವುದು ಅತ್ಯವಶ್ಯಕ. ಸಾವಯವ ಪದಾರ್ಥಗಳಾದ ತೆಂಗಿನ ನಾರಿನ ಪುಡಿ, ತೆಂಗಿನ ಸಿಪ್ಪೆ, ಹಸಿರೆಲೆ, ಒಣಗಿದ ಗರಿ,ಎಲೆ ಹಾಗು ಇತರೆ ಪದಾರ್ಥಗಳನ್ನು ತೆಂಗಿನ ಮರದ ಬುಡದಿಂದ 6 ಅಡಿ ಅಂತರದವರೆಗೆ ವೃತ್ತಾಕಾರದಲ್ಲಿ ಅಥವಾ ಅರ್ಧಚಂದ್ರಾಕೃತಿಯಲ್ಲಿ ಸಾವಯವ ಹೊದಿಕೆ ಮಡುವುದರಿಂದ ತೇವಾಂಶವನ್ನು ಕಾಪಾಡಿಕೊಳ್ಳಬಹುದು ಅಥವಾ ಮರದಿಂದ ಸುಮಾರು 3 ಮೀಟರ್ ಅಂತರದಲ್ಲಿ 8 ಅಡಿ ಉದ್ದ, 4 ಅಡಿ ಅಗಲ ಹಾಗು 3 ಅಡಿ ಆಳದ ಕಂದಕಗಳನ್ನು ತೆಗೆದು, ಸಿಪ್ಪೆಗಳ ಹುಬ್ಬಾಗಿರುವ ಭಾಗವು ಮೇಲ್ಮುಖವಾಗಿರುವಂತೆ ಪದರವಾಗಿ ಕಂದಕಗಳಲ್ಲಿ ಜೋಡಿಸಿ, ಪ್ರತಿ ಪದರವನ್ನು ಮಣ್ಣಿನಿಂದ ಮುಚ್ಚುವುದು. ಹೀಗೆ ಮಾಡುವುದರಿಂದ ತೆಂಗಿನ ಮರದ ಸುತ್ತ ತೇವಾಂಶ ಮತ್ತು ಪೋಷಕಾಂಶಗಳನ್ನು ಕಾಪಾಡಿಕೊಳ್ಳಬಹುದು ಎಂದು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ವಿ.ಗೋವಿಂದಗೌಡ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ತಿಪಟೂರು ಇವರು ತಿಳಿಸಿದರು.

## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ವತಿಯಿಂದ 2024–25 ರ ಸಾಲಿನ ದೂರಶಿಕ್ಷಣದಡಿ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2024–25 ನೇ ಸಾಲಿಗೆ ದೂರಶಿಕ್ಷಣದ ಮೂಲಕ ಕೃಷಿಗೆ ಸಂಬಂದಿಸಿದ ಡಿಪ್ಲೊಮೊ ಮತ್ತು ಸರ್ಟಿಫಿಕೆಟ್ ಕೋರ್ಸ್‌ಗಳನ್ನು ಕನ್ನಡ ಮಾಧ್ಯಮದಲ್ಲಿ ಕಲಿಯಲು ಅರ್ಜಿ ಆಹ್ವಾನಿಸಿದೆ. ಒಂದು ವರ್ಷದ ಕೃಷಿ ಡಿಪ್ಲೊಮಾ ಕೋರ್ಸ್, ಸರ್ಟಿಫಿಕೆಟ್ ಕೋರ್ಸ್‌ಗಳಾದಂತಹ ಸಮಗ್ರ ಕೃಷಿ, ಸಾವಯವ ಕೃಷಿ (ಅಂಚೆ ಶಿಕ್ಷಣ), ಕೃಷಿಯಲ್ಲಿ ಬೀಜೋತ್ಪಾದನೆ ತಾಂತಿಕತೆಗಳು, ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ ಹಾಗೂ ಜೇನು ಸಾಕಾಣಿಕೆ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದ್ದು, ಏಪ್ರಿಲ್ 19, 2024 ರ ವರೆಗೆ ಅರ್ಜಿಗಳನ್ನು ಸಂಯೋಜಕರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಜಿ.ಕೆ.ವಿ.ಕೆ, ಬೆಂಗಳೂರು ಅಥವಾ ಕೃಷಿ ವಿಜ್ಞಾನ ಕೇಂದ್ರ, ಬಿದರೇಗುಡಿ ಕಾವಲ್, ತಿಪಟೂರು ತಾ., ತುಮಕೂರು ಜಿಲ್ಲೆ ಅಥವಾ ವಿ.ವಿ. ವೆಬ್ಸೈಟ್ www.uasbangalore.edu.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ : 30 ಏಪ್ರಿಲ್ 2024 ( ಮಧ್ಯಾಹ್ನ 3.00 ರ ಒಳಗೆ) ಸಲ್ಲಿಸತಕ್ಕದ್ದು ಎಂದು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳಾದ ಡಾ. ವಿ. ಗೋವಿಂದ ಗೌಡರು ತಿಳಿಸಿದ್ದಾರೆ.

# ಸಿರಿಧಾನ್ಯ ಪಾಕ ಸ್ಪರ್ಧೆ/ ಆಹಾರ ಮೇಳ



ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ವತಿಯಿಂದ ತಿಪಟೂರು ತಾಲ್ಲೂಕಿನ ಪರುವಗೊಂಡನಹಳ್ಳಿಯಲ್ಲಿ ಸಿರಿಧಾನ್ಯ ಪಾಕ ಸ್ಪರ್ಧೆ/ ಆಹಾರ ಮೇಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ. ಅಶೋಕ್, ಉಪ ಕೃಷಿ ನಿರ್ದೇಶಕರು, ತುಮಕೂರು ಇವರು ನೆರವೇರಿಸಿ ಮಾತನಾಡಿ ಜನರ ಜೀವನಶೈಲಿ ಬದಲಾಗುತ್ತಿದ್ದಂತೆ ಸಾಂಪ್ರದಾಯಿಕ ಹಾಗೂ ಆರೋಗ್ಯಕರ ಅಡುಗೆ ತಿನಿಸುಗಳು ಮರೆತೇ ಹೋಗಿವೆ. ಸಿರಿಧಾನ್ಯಗಳು ಪೌಷ್ಟಿಕತೆಗೆ ಹೆಸರುವಾಸಿಯಾಗಿದ್ದು ಹೆಚ್ಚಿನ ಪ್ರಮಾಣದ ಪ್ರೋಟಿನ್, ನಾರಿನಾಂಶವಿರುತ್ತದೆ ಎನ್ನುವುದರ ಜೊತೆಗೆ ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳ ಕಡಗೆ ಹೆಚ್ಚು ಗಮನಹರಿಸಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ವಿ. ಗೋವಿಂದ ಗೌಡರವರು ಮಾತನಾಡಿ ಸಿರಿಧಾನ್ಯಗಳನ್ನು ಬೆಳೆಯಲು ಫಲವತ್ತಾದ ಭೂಮಿಯೇ ಬೇಕೆಂದಿಲ್ಲ. ವಿಶಿಷ್ಟ ಗುಣಗಳಿರುವ ಸಿರಿಧಾನ್ಯಗಳನ್ನು ಕಡಿಮೆ ಮಳೆಯಾಶ್ರಿತ ಪ್ರದೇಶದಲ್ಲಿಯೂ ಬೆಳೆಯಬಹುದು ಎನ್ನುವುದರ ಜೊತೆಗೆ ಸಿರಿಧಾನ್ಯಗಳಿಂದ ಸಿದ್ಧಪಡಿಸಿದ ಅಡುಗೆಯ ರುಚಿಕರವಾಗಿರುತ್ತದೆ ಮತ್ತು ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆ ಮಾಡುವುದರಿಂದ ಹೆಚ್ಚು ಆದಾಯವನ್ನು ಪಡೆಯಬಹುದು ಎಂದರು.

ಶ್ರೀ. ಸಿದ್ದರಾಮೇಶ್ವರ, ವೃತ್ತ ನಿರೀಕ್ಷಕರು, ತಿಪಟೂರು ಗ್ರಾಮಾಂತರ ಮಾತನಾಡಿ ಸಿರಿಧಾನ್ಯಗಳು ಅಂದು ಬಡವರ ಆಹಾರವಾಗಿತ್ತು ಇಂದು ಶ್ರೀಮಂತರ ಆಹಾರವಾಗಿದೆ. ಸಿರಿಧಾನ್ಯಗಳನ್ನು ಬಳಸಿದರೆ ಬಿ.ಪಿ., ಮಧುಮೇಹದಂತಹ ಕಾಯಿಲೆಗಳಿಂದ ದೂರವಿರಬಹುದು ಮತ್ತು ಇಂತಹ ಪ್ರದರ್ಶನಗಳಿಂದ ಜನರಲ್ಲಿ ಅರಿವು ಮೂಡುತ್ತದೆ ಎಂದು ರೈತರಿಗೆ ಕರೆ ಕೊಟ್ಟರು.

ಕಾರ್ಯಕ್ರಮದಲ್ಲಿ 35ಕ್ಕೂ ಹೆಚ್ಚು ಮಹಿಳೆಯರು ಸಿರಿಧಾನ್ಯಗಳಿಂದ ತಯಾರಿಸಿದ ಖಾದ್ಯಗಳನ್ನು ಪ್ರದರ್ಶಿದರು. ಅತ್ಯುತ್ತಮ ಸಿರಿಧಾನ್ಯ ಖಾದ್ಯವನ್ನು ತಯಾರಿಸಿದ ಮೊದಲ 05 ಜನ ಮಹಿಳೆಯರಿಗೆ ಪ್ರಶಸ್ತಿಯನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ನಿತ್ಯಶ್ರೀ ಕೆ, ಡಾ. ಕೀರ್ತಿಶಂಕರ್ ಕೆ ಹಾಗೂ ಶೀ. ಚೆನ್ನಕೇಶವಮೂರ್ತಿ, ಎ.ಡಿ.ಎ., ಕೃಷಿ ಇಲಾಖೆ, ತಿಪಟೂರು, ಡಾ. ಯೋಗೀಶ್, ಕ್ಷೇತ್ರ ಅಧೀಕ್ಷಕರು, ಎ.ಆರ್.ಎಸ್, ತಿಪಟೂರು, ಶ್ರೀ. ಅಡವೀಶ್ ಕುಮಾರ್, ಪಿ.ಡಿ.ಓ, ಸಾರ್ಥವಳ್ಳಿ ಗ್ರಾಮ ಪಂಚಾಯಿತಿ, ಉಪಾಧ್ಯಕ್ಷರು ಶ್ರೀಮತಿ ಭವ್ಯ, ಶ್ರೀ. ಯೋಗಾನಂದ ಮೂರ್ತಿ ತಡಸೂರಿನ ಪ್ರಗತಿ ಪರ ರೈತರು, ಮೈತ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಶಿಕ್ಷಕರಾದ ಶಶಿಕಲಾದೇವಿ, ಧನಲಕ್ಷ್ಮಿ, ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀ. ರೇಣುಕಮೂರ್ತಿ, ಪವಿತ್ರ, ರತ್ನ ಹಾಗೂ ಗ್ರಾಮಸ್ಥರು ಹಾಜರಿದ್ದರು.

# ಕೃಷಿಯಲ್ಲಿ ಸಮೃದ್ಧಿ ಸಾಧಿಸಿದ ಕೃಷಿ ವಿಜ್ಞಾನ ಕೇಂದ್ರದ ದತ್ತು ಗ್ರಾಮ

ದೇಶದ ಆರ್ಥಿಕತೆಯು ಹಳ್ಳಿಯ ಆರ್ಥಿಕತೆಯನ್ನು ಅವಲಂಬಿಸಿದೆ. ಹಳ್ಳಿಗಳ ಆರ್ಥಿಕತೆಯು ಕೃಷಿಯ ಮೇಲೆ ಅವಲಂಬಿತವಾಗಿದೆ. ಇದು ಹಳ್ಳಿಗಳಲ್ಲಿ ಲಭ್ಯವಿರುವ ಭೂಮಿ ಮತ್ತು ನೀರಿನ ಪ್ರಮಾಣ ಮತ್ತು ಗುಣಮಟ್ಟ, ಅನೇಕ ಕೃಷಿ ಪರಿಕರಗಳ ಲಭ್ಯತೆ ಹಾಗೂ ಪರಿಸರ ಆಧಾರಿತ ಅಂಶಗಳ ಮೇಲೆ ಅವಲಂಬಿಸಿರುತ್ತದೆ ಮತ್ತು ಇದು ಒಟ್ಟು ಉತ್ಪಾದಕತೆಗೆ ಕೊಡುಗೆ ನೀಡುತ್ತದೆ.

ನಮ್ಮ ರಾಷ್ಟ್ರದ ಪಿತಾಮಹ ಮಹಾತ್ಮ ಗಾಂಧೀಜಿಯವರು 'ಭಾರತವು ಹಳ್ಳಿಗಳಲ್ಲಿ ವಾಸಿಸುತ್ತದೆ' ಎಂದು ಹೇಳುವ ಮೂಲಕ ಗ್ರಾಮೀಣ ಭಾರತದ ಮಹತ್ವವನ್ನು ಒತ್ತಿ ಹೇಳಿದರು. ಅಂದಿನಿಂದ ನಮ್ಮ ದೇಶವನ್ನು ಅಭಿವೃದ್ಧಿಪಡಿಸಲು ಸರ್ಕಾರಗಳು ಸತತವಾಗಿ ಪ್ರಯತ್ನಿಸುತ್ತವೆ. ಈ ನಿಟ್ಟಿನಲ್ಲಿ ಕೃಷಿ ವಿಶ್ವವಿದ್ಯಾನಿಲಯವು ದತ್ತು ಗ್ರಾಮ ಯೋಜನೆಯನ್ನು ಒಂದು ಪ್ರಮುಖ ಯೋಜನೆಯಾಗಿ ಪರಿಗಣಿಸಿ ಕೃಷಿ ವಿಜ್ಞಾನ ಕೇಂದ್ರ ಹಾಗೂ ಇನ್ನಿತ್ತರ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಕ್ಷೇತ್ರಿಯ ಅಗತ್ಯಗಳನ್ನು ಅಂದರೆ ಕೃಷಿಯನ್ನು ಮಾತ್ರ ಗುರಿಯಾಗಿಸಿಕೊಳ್ಳದೇ ಗ್ರಾಮೀಣ ಜನರ ಸಮಗ್ರ ಅಭಿವೃದ್ಧಿಯನ್ನು ಒಳಗೊಂಡ ಹಳ್ಳಿಗಳ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ತರಲು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ.

ಈ ಮೇಲ್ಕಂಡ ಉದ್ದೇಶದಂತೆ ಕೃಷಿ ವಿಜ್ಞಾನ ಕೇಂದ್ರ ಕೊನೇಹಳ್ಳಿ ತಿಪಟೂರು, ಕೃಷಿ ಹಾಗೂ ಸಂಬಂಧಿತ ಇಲಾಖೆಗಳ ಸಹಯೋಗದೊಂದಿಗೆ ಮೂರು ವರ್ಷಗಳ ಕಾಲಾವಧಿಗೆ ಕೃಷಿ ಹಾಗೂ ಸಂಬಂಧಿತ ಕ್ಷೇತ್ರದಲ್ಲಿ ನೂತನ ಹಾಗೂ ಸುಧಾರಿತ ತಂತ್ರಜ್ಞಾನಗಳನ್ನು ರೈತರಿಗೆ ಪ್ರಾತ್ಯಕ್ಷಿಕೆಗಳ ಮೂಲಕ ಪರಿಚಯ, ಅವರ ಉತ್ಪಾದನೆ ಹಾಗೂ ಲಾಭವನ್ನು ಹೆಚ್ಚಿಸುವುದರ ಜೊತೆಗೆ ರೈತರು ಹಾಗೂ ಹಳ್ಳಿಯ ಸರ್ವತೋಮುಖ ಬೆಳವಣಿಗೆಗೆ ಆರೋಗ್ಯ, ಸಮತೋಲನ ಆಹಾರ, ಹೈನುರಾಸುಗಳ ಪಾಲನೆ, ಸ್ವಚ್ಚತೆ ಮತ್ತು ಜನರ ಸಾಮಾಜಿಕ ವ್ಯವಸ್ಥೆಗಳಲ್ಲಿ ಬದಲಾವಣೆ ತರುವ ಸಲುವಾಗಿ ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಹೋಬಳಿಯ ಗ್ಯಾರಘಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರುವ ಚಿಕ್ಕಹೊನ್ನವಳ್ಳಿ ಎಂಬ ಗ್ರಾಮವನ್ನು ಗುರುತಿಸಿ ದತ್ತು ಗ್ರಾಮವನ್ನಾಗಿ ಸ್ವೀಕರಿಸಲಾಯಿತು.

ಚಿಕ್ಕಹೊನ್ನವಳ್ಳಿಯು ಒಂದು ಮಧ್ಯಮ ಗಾತ್ರದ ಗ್ರಾಮವಾಗಿದ್ದು, 166 ಕುಟುಂಬಳಿಂದ ಒಟ್ಟು 675 ಜನಸಂಖ್ಯೆಯನ್ನು ಹೊಂದಿದೆ. ಗ್ರಾಮದ ಸಾಕ್ಷರತೆ ಪ್ರಮಾಣವು ಶೇಕಡಾ 82.14 ಆಗಿದ್ದು ಕರ್ನಾಟಕ ರಾಜ್ಯದ ಸರಾಸರಿ (75.35 %) ಗಿಂತ ಹೆಚ್ಚಿದೆ. ಗ್ರಾಮದ ಜನಸಂಖ್ಯೆಯಲ್ಲಿ 339 ಪುರುಷರು ಮತ್ತು 336 ಮಹಿಳೆಯರಿದ್ದು, ಶೇಕಡಾ 7.11 ರಷ್ಟು ಜನಸಂಖ್ಯೆ 0– 6 ವರ್ಷದ ಮಕ್ಕಳಿಂದ ಕೂಡಿದೆ.

ದತ್ತು ಗ್ರಾಮವಾದ ಚಿಕ್ಕಹೊನ್ನವಳ್ಳಿಯ ಭೌಗೋಳಿಕ ವಿಸ್ತೀರ್ಣ 283.40 ಹೆಕ್ಟೇರ್ ರಷ್ಟಿದ್ದು, ಶೇ. 92 ರಷ್ಟು ಭೂಮಿ ಸಾಗುವಳಿಯಿಂದ ಮತ್ತು ಶೇ. 63 ರಷ್ಟು ಭೂಮಿ ಮಳೆಯಾಶ್ರಿತದಿಂದ ಕೂಡಿದೆ. ಗ್ರಾಮವು ಕೆಂಪು ಮರಳು ಮಿಶ್ರಿತ ಮಣ್ಣನ್ನು ಹೊಂದಿದ್ದು, ಜೀವನೋಪಾಯಕ್ಕಾಗಿ ಕೃಷಿಯ ಜೊತೆಗೆ ಪಶುಸಂಗೋಪನೆಯನ್ನು ಕೂಡ ಅವಲಂಬಿಸಿದೆ.

ಗ್ರಾಮದ ರೈತರು ಕೃಷಿ ಬೆಳೆಗಳಾದ ರಾಗಿ, ತೊಗರಿ, ಹೆಸರು, ಹುರಳಿ, ಅರಳು, ಅಲಸಂದೆ, ಅವರೆಯ ಹಾಗೂ ತೋಟಗಾರಿಕೆ ಬೆಳೆಗಳಾದ ತೆಂಗು, ಬಾಳೆ, ನುಗ್ಗೆ, ಬದನೆ, ಅಡಿಕೆಯನ್ನು ಬೆಳೆಯುತ್ತಿದ್ದಾರೆ. ಈ ಗ್ರಾಮವು ಜಿಲ್ಲೆಯಿಂದ 115 ಕಿ.ಮಿ. ಹಾಗೂ ತಾಲ್ಲೂಕಿನಿಂದ 25 ಕಿ.ಮಿ. ದೂರದಲ್ಲಿದ್ದು, ಶಿಕ್ಷಣ, ಆರೋಗ್ಯ, ಮಾರುಕಟ್ಟೆ ಹಾಗೂ ಇನ್ನಿತರ ಸೌಲಭ್ಯಗಳಿಗೆ ಜನರು ಹೊನ್ನವಳ್ಳಿ ಹಾಗೂ ತಿಪಟೂರು ನಗರದ ಮೇಲೆ ಅವಲಂಬಿತರಾಗಿದ್ದಾರೆ.

ದತ್ತು ಗ್ರಾಮ ಯೋಜನೆಯಡಿ 2019–20ನೇ ಸಾಲಿನಲ್ಲಿ ಈ ಗ್ರಾಮವನ್ನು ಆಯ್ಕೆ ಮಾಡಿ ಆರಂಬಿಕ ಹಂತದಲ್ಲಿ ಈ ಗ್ರಾಮದ ಸಮಸ್ಯೆಗಳನ್ನು ಗ್ರಾಮೀಣ ಸಹಭಾಗಿತ್ವ ಅದ್ಯಯನದ ಮೂಲಕ ವಿಶ್ಲೇಷಿಸಿ ಈ ಕೆಳಕಂಡ ಅಂಶಗಳನ್ನು ಗುರುತಿಸಲಾಯಿತು.

ಕೃಷಿಯಲ್ಲಿ ಕಡಿಮೆ ಉತ್ಪಾದನೆ, ಬೀಜೋಪಚಾರ ಹಾಗೂ ಲಘು ಪೋಷಕಾಂಶಗಳ ಬಗ್ಗೆ ಅರಿವು ಇಲ್ಲದೆ ಇರುವುದು, ಸುಧಾರಿತ ತಳಿಗಳ ಬಗ್ಗೆ ಕಡಿಮೆ ಜ್ಞಾನ, ಮೇವಿನ ಕೊರೆತೆ, ತೆಂಗಿನಲ್ಲಿ ಕೀಟ ಹಾಗೂ ರೋಗದ ಭಾದೆ, ಕೃಷಿಯಲ್ಲಿ ಅವೈಜ್ಞಾನಿಕ ರಸಗೊಬ್ಬರ ಮತ್ತು ಕೀಟನಾಶಕಗಳ ಬಳಕೆ, ಜಾನುವಾರುಗಳ ಅವೈಜ್ಞಾನಿಕ ನಿರ್ವಹಣೆ, ಪ್ರಗತಿ ಕಾಣದ ರೈತ ಹಾಗೂ ಮಹಿಳೆಯರ ಸಂಘಗಳು, ಮಣ್ಣು, ನೀರು ಹಾಗೂ ಇಂಧನ ಸಂರಕ್ಷಣೆಯ ಜಾಗೃತಿಯ ಕೊರತೆ, ಪೌಷ್ಠಿಕಾಂಶದ ಕೊರತೆ, ಸಮಗ್ರ ಕೃಷಿಯ ಬಗ್ಗೆ ಕಡಿಮೆ ಜ್ಞಾನ, ಮೌಲ್ಯವರ್ಧನೆ ಮೂಲಕ ಉದ್ಯೋಗವನ್ನು ಸೃಷ್ಟಿಸಿಕೊಳ್ಳುವ ಅರಿವು ಇಲ್ಲದಿರುವುದು ಇತ್ಯಾದಿ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಲಾಯಿತು.

ಮೇಲ್ಕಂಡ ಸಮಸ್ಯೆಗಳನ್ನು 3 ವರ್ಷದ ಕ್ರೀಯಾ ಯೋಜನೆಯಲ್ಲಿ ಪರಿಗಣಿಸಿ ಆ ಸಮಸ್ಯೆಗಳಿಗೆ ಪರಿಹಾರ ಹಾಗೂ ತಂತ್ರಜ್ಞಾನಗಳನ್ನು ಗ್ರಾಮದ ರೈತರಿಗೆ ವಿವಿಧ ವಿಸ್ತರಣಾ ಚಟುವಟಿಕೆಗಳ ಮೂಲಕ ಪ್ರಸರಣೆ ಹಾಗೂ ಅಳವಡಿಕೆ ಕುರಿತು ಕೆಳಕಂಡಂತೆ ಗಮನ ವಹಿಸಿದೆ.

ವಿವಿಧ ಅಗತ್ಯ ಆಧಾರಿತ ವಿಷಯಗಳ ಕುರಿತು, ಪ್ರಮುಖವಾಗಿ ಸುಧಾರಿತ ಬೇಸಾಯ ಕ್ರಮಗಳು, ಸಮಗ್ರ ಪೋಷಕಾಂಶಗಳ ನಿರ್ವಹಣೆ, ಸಮಗ್ರ ಕೀಟ ಹಾಗೂ ರೋಗದ ಹತೋಟಿ ಕ್ರಮಗಳು, ಕೊಯ್ಲೋತ್ತರ ಸಂಸ್ಕರಣೆ, ನೈಸರ್ಗಿಕ ಕೃಷಿ ಕುರಿತು 23 ತರಬೇತಿಗಳನ್ನು ಯಶಸ್ವಿಯಾಗಿ ಕೈಗೊಳ್ಳಲಾಗಿದೆ.

ಗ್ರಾಮಸ್ಥರಿಗೆ ಮಣ್ಣಿನ ಫಲವತ್ತತೆ ಕುರಿತು 2 ಆಂದೋಲನಗಳ್ನು ಕೈಗೊಂಡು ಗ್ರಾಮದ ರೈತರ ಜಮೀನಿನ ಮಣ್ಣಿನ ಪರೀಕ್ಷೆ ಮಾಡಿಸಿ ಮಣ್ಣಿನ ಆರೋಗ್ಯ ಚೀಟಿ ವಿತರಿಸಲಾಗಿದೆ.

ರೈತರ ತಾಕುಗಳಲ್ಲಿ ರಾಗಿಯಲ್ಲಿ ಸುಧಾರಿತ ತಳಿಯಾದ ಎಂ.ಎಲ್. – 365, ಎಂ.ಆರ್. –6, ಕೆ.ಎಂ.ಆರ್. – 630, ತೊಗರಿಯಲ್ಲಿ ಬಿ.ಅರ್.ಜಿ. – 5, ನುಗ್ಗೆಯಲ್ಲಿ ಭಾಗ್ಯ, ಪಪ್ಪಾಯದಲ್ಲಿ ರೆಡ್ ಲೇಡಿ, ಬದನೆಯಲ್ಲಿ ಪೋಷಕಾಂಶ ನಿರ್ವಹಣೆಯಲ್ಲಿ ಎ.ಎಮ್.ಸಿ. ಬಳಕೆ, ತೊಗರಿಯಲ್ಲಿ pulse magic, ಅಡಿಕೆಯಲ್ಲಿ ಸೂಕ್ಷ್ಮ ಪೋಷಕಾಂಶಗಳ ಬಳಕೆ, ತೆಂಗು ಹಾಗೂ ಇನ್ನಿತರ ತೋಟಗಾರಿಕೆ ಬೆಳೆಗಳು, ಸಸ್ಯ ಸಂರಕ್ಷಣೆ, ಮೇವಿನ ಬೆಳೆಯಲ್ಲಿ ಅಔಈಖ–29 & 31, ಜಾನುವಾರುಗಳಲ್ಲಿ ಜಂತು ಹುಳುಗಳ ನಿರ್ವಹಣೆ ಕುರಿತು ಮುಂಚೂಣೆ ಹಾಗೂ ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

ಯೋಜನೆಯ ಅಳವಡಿಕೆಗೆ ಮೊದಲು ಗ್ರಾಮದಲ್ಲಿ ಸುಮಾರು 96 ಹೆಕ್ಟೇರ್ ಪ್ರದೇಶದಲ್ಲಿ ಸ್ಥಳೀಯ ರಾಗಿ ತಳಿಯನ್ನು ಬೆಳೆಯುತ್ತಿದ್ದರು. ಇಂದು 116 ಹೆಕ್ಟೇರ್ ಪ್ರದೇಶದಲ್ಲಿ ಬರ ನಿರೋಧಕ ಹಾಗೂ ಸುಧಾರಿತ ತಳಿಗಳಾದ ಎಂ.ಎಲ್. – 365, ಎಂ.ಆರ್. –6 ತಳಿ ಅಳವಡಿಕೆಯಿಂದ ಗ್ರಾಮದ ಒಟ್ಟಾರೆ ಆದಾಯ ರಾಗಿಯಲ್ಲಿ ರೂ 58,80,000 ದಿಂದ ರೂ. 81,20,000 ರವರೆಗೂ ಹೆಚ್ಚಳವಾಗಿದೆ.

ಗ್ರಾಮದಲ್ಲಿ ಮೊದಲು 36 ಹೆಕ್ಟೇರ್ ಪ್ರದೇಶದಲ್ಲಿ ಸ್ಥಳೀಯ ತೊಗರಿ ಬೆಳೆಯುತ್ತಿದ್ದರು. ಯೋಜನೆಯಿಂದ ಇಂದು 48 ಹೆಕ್ಟೇರ್ ಪ್ರದೇಶದಲ್ಲಿ ಸುಧಾರಿತ ಬಿ.ಅರ್.ಜಿ – 5, ಎಂ.ಆರ್. –6 ತಳಿ ಬೆಳೆಯಿತ್ತಿದ್ದು ಒಟ್ಟು ತೊಗರಿಯ ಆದಾಯ ರೂ 15,75,000 ದಿಂದ ರೂ 27,00,000 ರವರೆಗೂ ಹೆಚ್ಚಳವಾಗಿದೆ.

ಗ್ರಾಮದಲ್ಲಿ ಮೊದಲು 4.5 ಹೆಕ್ಟೇರ್ ಪ್ರದೇಶದಲ್ಲಿ ಸ್ಥಳೀಯ ಮೇವಿನ ಬೆಳೆಯನ್ನು ಬೆಳೆಯುತ್ತಿದ್ದರು. ನಂತರ ಯೋಜನೆಯ ವತಿಯಿಂದ ಬಹುಕಟಾವಿನ COFS–29 & 31 ತಳಿಯನ್ನು 8 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಇದೇ ರೀತಿ ಅವರೆ, ಅಲಸಂದೆ, ನುಗ್ಗೆ, ಕರಿಬೇವು ಬೆಳೆಗಳ ವಿಸ್ತೀರ್ಣವನ್ನು ಹೆಚ್ಚು ಮಾಡಿಕೊಂಡು ಈ ಬೆಳೆಗಳ ಆದಾಯವನ್ನು ಸಹ ಹೆಚ್ಚಿಸಿಕೊಂಡಿರುತ್ತಾರೆ.

ಯೋಜನೆಯ ವತಿಯಿಂದ ತೆಂಗು ಮತ್ತು ಅಡಿಕೆಯ ಸಮಗ್ರ ಪೋಷಕಾಂಶ ಹಾಗೂ ರೋಗ, ಕೀಟ ನಿರ್ವಹಣಾ ಪದ್ಧತಿಗಳನ್ನು ಕಲಿತು ಅಳವಡಿಸಿಕೊಂಡು ಹಿಂದೆ ಇದ್ದ 43.20 ಹೆಕ್ಟೇರ್ ಪ್ರದೇಶವನ್ನು 46.70 ಹೆಕ್ಟೇರ್ ಪ್ರದೇಶ ವಿಸ್ತರಿಸಿಕೊಂಡು ಒಟ್ಟಾರೆ ತೆಂಗು ಮತ್ತು ಅಡಿಕೆಯಿಂದ 64,42,000 ರಿಂದ ರೂ. 1,07,60,000 ವರಗೆ ಹೆಚ್ಚಳವಾಗಿದೆ.

ಶುದ್ಧ ಹಾಲು ಉತ್ಪಾದನೆ, ಜಾನುವಾರುಗಳ ಪೋಷಣೆ, ಪರಾವಲಂಬಿ ಕೀಟಗಳ ನಿರ್ವಹಣೆ, ಸಮಯಕ್ಕೆ ಸರಿಯಾಗಿ ಲಸಿಕೆ ಹಾಕಿಸುವುದು, ಕರುಗಳ ಪಾಲನೆ ಹಾಗೂ ಪೋಷಣೆ ಕುರಿತು ರೈತರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ನುರಿತ ಪಶು ಸಂಗೋಪನಾ ತಜ್ಞರ ಸಹಾಯದಿಂದ 6 ಪಶು ಆರೋಗ್ಯ ಶಿಬಿರಗಳನ್ನು ಆಯೋಜಿಸಿದ್ದು ಚಿಕ್ಕಹೊನ್ನವಳ್ಳಿ ಹಾಗೂ ಸುತ್ತಮುತ್ತಲಿನ 339 ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಗಿದೆ.

ರೈತ ಹಾಗೂ ರೈತ ಮಹಿಳೆಯರಿಗೆ ಪೌಷ್ಟಿಕದ ಪ್ರಾಮುಖ್ಯ ಕುರಿತು 3 ಪೋಷಣ ಸಪ್ತಾಹ, ಆರೋಗ್ಯ ಶಿಬಿರ ಹಾಗೂ 30 ಪೌಷ್ಟಿಕ ಕೈ ತೋಟಗಳನ್ನು ಪ್ರಾತ್ಯಕ್ಷಿಕೆ ನೀಡಿ ತಾಜ ಹಾಗೂ ಸಾವಯವ ತರಕಾರಿ ಹಾಗೂ ಸೊಪ್ಪನ್ನು ಸೇವಿಸಲು ಅರಿವು ಮೂಡಿಸಲಾಗಿದೆ.

ಇದಲ್ಲದೇ, ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಗ್ರಾಮದಲ್ಲಿ ನಿಯಮಿತ ಕ್ಷೇತ್ರ ಭೇಟಿ, ಕೃಷಿ ಕ್ಷೇತ್ರ ಪಾಠಾಶಾಲೆಯ ಆಯೋಜನೆ ಹಾಗೂ ಕೃಷಿ ಸಂಬಂಧಿತ ಇಲಾಖೆಗಳ ಸಹಯೋಗದೊಂದಿಗೆ ಕೃಷಿ/ಕೃಷಿಯೇತರ ವಿಷಯಗಳ ಕುರಿತು ತರಬೇತಿ, ಹಾಗೂ ಕ್ಷೇತ್ರೋತ್ಸವಗಳನ್ನು ಹಮ್ಮಿಕೊಳ್ಳುವ ಮೂಲಕ ತಂತ್ರಜ್ಞಾನದ ಅರಿವು/ಜಾಗೃತಿಯನ್ನು ಮೂಡಿಸಲಾಯಿತು.

ತೆಂಗು ಅಭಿವೃದ್ಧಿ ಮಂಡಳಿ ಬೆಂಗಳೂರು, ಮ್ಯಾನೇಜ್, ಹೈದರಾಬಾದ್, ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ಹಾಗೂ ಇನ್ನಿತರ ಸಂಸ್ಥೆಗಳ ಸಹಾಯದೊಂದಿಗೆ ಗ್ರಾಮದ ಯುವ ರೈತರಿಗೆ ಕೌಶಲ್ಯಾಧಾರಿತ ತರಬೇತಿಗಳನ್ನು ನೀಡಿ ಸ್ವ ಉದ್ಯೋಗವನ್ನು ಕೈಗೊಳ್ಳಲು ಪ್ರೋತ್ಸಾಹಿಸಲಾಯಿತು. ಹಾಗೂ ರೈತರಿಗೆ ಸಮಗ್ರ ಕೃಷಿ, ಆಹಾರ ಸಂಸ್ಕರಣೆ, ಮತ್ತು ಮೌಲ್ಯವರ್ಧನೆ, ಬಾಡಿಗೆ ಆಧಾರಿತ ಕೃಷಿ ಯಂತ್ರೋಪಕರಣ ಸೇವಾ ಕೇಂದ್ರ, ಪ್ರಗತಿಪರ ರೈತರ ತಾಕುಗಳಿಗೆ, ಹಾಗೂ ಇತರ ಅವಶ್ಯಕ ಆಧಾರಿತ ವಿಷಯಗಳ ಕುರಿತು ಹೆಚ್ಚಿನ ಅರಿವು ಮೂಡಿಸಲು ಹಾಗೂ ಮಾಹಿತಿ ತಿಳಿಸಲು ವಿವಿಧ ಸ್ಥಳಗಳಿಗೆ, ಹಾಗೂ ಪ್ರತಿ ವರ್ಷ ಜಿ.ಕೆ.ವಿ.ಕೆ ಯಲ್ಲಿ ನಡೆಯುವ ಕೃಷಿ ಮೇಳಕ್ಕೆ ಒಟ್ಟು 6 ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಲಾಯಿತು.

ಒಟ್ಟಾರೆಯಾಗಿ ಕೃಷಿ ವಿಜ್ಞಾನ ಕೇಂದ್ರ ಕೊನೇಹಳ್ಳಿಯು ವಿವಿಧ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಚಿಕ್ಕಹೊನ್ನವಳ್ಳಿ ಗ್ರಾಮದಲ್ಲಿ ವಿವಿಧ ತಂತ್ರಜ್ಞಾನ / ಯೋಜನೆಗಳನ್ನು ಪರಿಚಯಿಸಿ, ಮೂರು ವರ್ಷವನ್ನು ಪೂರೈಸಿದ್ದು ಗ್ರಾಮದ ಸಂಘಗಳ ಅಭಿವೃದ್ಧಿ, ಕೃಷಿ ಹೊಂಡ, ಜನರಿಗೆ ಆರೋಗ್ಯ ತಪಾಸಣೆ, ನೀರು ಸಂರಕ್ಷಣೆಗೆ ಬದು ನಿರ್ಮಾಣ, ಅಭಿವೃದ್ಧಿ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳನ್ನು ಪಡೆಯಲು ರೈತರಿಗೆ ಹಾಗೂ ಗ್ರಾಮಸ್ಥರಿಗೆ ಸಹಾಯ ಮಾಡಿ ಈ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡಲು ಅತ್ಯಂತ ಮಹತ್ವದ ಕೊಡುಗೆ ನೀಡಿರುತ್ತದೆ





## ಜೇನುನೊಣ ತರಬೇತಿ ಕಾರ್ಯಕ್ರಮ



ಐಸಿಎಆರ್– ಕೆವಿಕೆ, ತಿಪಟೂರು, ತುಮಕೂರು–1 ಮತ್ತು ಸ್ವರ್ಣಭೂಮಿ ಎಫ್.ಪಿ.ಒ, ದಬ್ಬೇಘಟ್ಟ, ತುರುವೇಕೆರೆ ತಾಲೂಕು ಸಹಯೋಗದೊಂದಿಗೆ ಕೆವಿಕೆ ಆವರಣದಲ್ಲಿ ಜೇನುಹುಳು ತರಬೇತಿ ಕಾರ್ಯಕ್ರಮವನ್ನು ದಿನಾಂಕ 23/02/2024 ರಂದು ಆಯೋಜಿಸಲಾಗಿತ್ತು. ಶ್ರೀ ಸಿದ್ದರಾಮೇಶ್ವರ, ವೃತ್ತ ನಿರೀಕ್ಷಕರು, ತಿಪಟೂರು ಗ್ರಾಮಾಂತರ, ತಿಪಟೂರು ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು ಡಾ.ವಿ.ಗೋವಿಂದ ಗೌಡ ಪ್ರಾಸ್ತಾವಿಕವಾಗಿ ಮಾತನಾಡಿ ಜೇನು ಸಾಕಾಣಿಕೆ ಆದಾಯದ ಮೂಲವಾಗಿದೆ ಎಂದು ತಿಳಿಸಿದರು.

ಜೇನು ಕೃಷಿ ತಜ್ಞರಾದ ಶ್ರೀ ಶಂಕರ್ ನಾರಾಯಣ್, ಜೇನು ಕೃಷಿ ವಿಭಾಗ, ಜಿಕೆವಿಕೆ, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಬೆಂಗಳೂರು ಇವರು ಜೇನು ಕೃಷಿ ಕುರಿತು ಉಪನ್ಯಾಸ ನೀಡಿದರು ಮತ್ತು ಜೇನುನೊಣ ಉತ್ಪಾದನೆಗೆ ಪ್ರಾಯೋಗಿಕ ಅಧಿವೇಶನವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಕೆವಿಕೆ ಸಿಬ್ಬಂದಿ ಹಾಗೂ 102 ರೈತರು ಭಾಗವಹಿಸಿದ್ದರು.

## ಸುಣ್ಣದಲ್ಲಿ ವೈಜ್ಞಾನಿಕ ಕೃಷಿ ಮತ್ತು ಸಸ್ಯ ಸಂರಕ್ಷಣಾ ಕ್ರಮಗಳ ಕುರಿತು ತರಬೇತಿ ಕಾರ್ಯಕ್ರಮ



ಪ್ರಧಾನಮಂತ್ರಿ ಕಿಸಾನ್ ಯೋಜನೆ ಕಾರ್ಯಕ್ರಮದ 16ನೇ ಕಂತಿನ ಬಿಡುಗಡೆಯ ಸಂದರ್ಭದಲ್ಲಿ ಐಸಿಎಆರ್– ಕೆವಿಕೆ, ತಿಪಟೂರು, ತುಮಕೂರು–1 ಜಿಲ್ಲೆಯಲ್ಲಿ "ಸುಣ್ಣದಲ್ಲಿ ವೈಜ್ಞಾನಿಕ ಕೃಷಿ ಮತ್ತು ಸಸ್ಯ ಸಂರಕ್ಷಣಾ ಕ್ರಮಗಳು" ಕುರಿತು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಡಾ.ಕೀರ್ತಿಶಂಕರ್, ಕೆ., ವಿಜ್ಞಾನಿ (ತೋಟಗಾರಿಕೆ) ಸುಣ್ಣದ ಕೃಷಿ, ಪ್ರಸರಣ ತಂತ್ರಗಳು, ತಳಿಗಳು, ಸಸ್ಯ ಸಂರಕ್ಷಣಾ ಕ್ರಮಗಳು ಇತ್ಯಾದಿಗಳ ಕುರಿತು ಉಪನ್ಯಾಸ ನೀಡಿದರು.

ಡಾ.ಸತೀಶ, ಎಚ್.ಎಸ್. ಕೃಷಿ ವ್ಯವಸ್ಥಾಪಕರು, ಎರೆಹುಳು ಗೊಬ್ಬರ ತಯಾರಿಕೆ ಬಗ್ಗೆ ವಿವರಿಸಿದರು. ಕೆವಿಕೆ ಚಟುವಟಿಕೆಗಳ ಕುರಿತು ವಿಜ್ಞಾನಿ (ಸಸ್ಯ ಸಂರಕ್ಷಣೆ) ಡಾ.ಮನೋಜ್, ಎಚ್. ತಿಳಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಕೆವಿಕೆ ಸಿಬ್ಬಂದಿ ಹಾಗೂ 45ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

## ಗ್ರಾಮಮಟ್ಟದ ಕೃಷಿ ಮೇಳ

ಐಸಿಎಆರ್–ಕೆವಿಕೆ–ತಿಪಟೂರು, ತುಮಕೂರು–1 ತುರುವೇಕೆರೆ ತಾಲೂಕಿನ ಹಿರೇಡೊಂಕನಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಕೃಷಿಮೇಳದಲ್ಲಿ ಭಾಗವಹಿಸಿದ್ದರು. ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ.ವಿ.ಗೋವಿಂದಗೌಡ ಕಾರ್ಯಕ್ರಮ ಉದ್ಘಾಟಿಸಿ, ಕೆವಿಕೆಯಲ್ಲಿ ದೊರೆಯುವ ಸವಲತ್ತುಗಳು ಮತ್ತು ಸೇವೆಗಳ ಕುರಿತು ಸಭಿಕರಿಗೆ ತಿಳಿವಳಿಕೆ ನೀಡಿದರು. ತೋಟಗಾರಿಕೆ ಬೆಳೆಗಳಲ್ಲಿನ ಪ್ರಮುಖ ಉತ್ಪಾದನಾ ತಂತ್ರಗಳ ಕುರಿತು ಉಪನ್ಯಾಸವನ್ನು ತೋಟಗಾರಿಕೆ ವಿಜ್ಞಾನಿಯಾದ ಡಾ.ಕೀರ್ತಿಶಂಕರ್, ಕೆ. ರವರು ನೀಡಿದರು.



ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ ಕುರಿತು ಸಸ್ಯ ರಕ್ಷಣೆ ವಿಜ್ಞಾನಿಯಾದ ಶ್ರೀ ಮನೋಜ್ ರವರು ಉಪನ್ಯಾಸವನ್ನು ನೀಡಿದರು, ಶ್ರೀ ದರ್ಶನ್ ಎಂ.ಇ. ವಿಜ್ಞಾನಿ (ಕೃಷಿ ವಿಸ್ತರಣೆ) ಪೂರ್ವ ಮುಂಗಾರು ನಿರ್ವಹಣೆಯ ಕುರಿತು ಸಭಿಕರನ್ನು ಉದ್ದೇಶಿಸಿ ಮಾತನಾಡುತ್ತಾ, ರೈತರ ಪ್ರಯೋಜನಕ್ಕಾಗಿ ಲಭ್ಯವಿರುವ ಸಾಮಾಜಿಕ ಭದ್ರತೆ ಮತ್ತು ಕೃಷಿ ಯೋಜನೆಗಳನ್ನು ಸಹ ಪ್ರಸ್ತಾಪಿಸಿದರು. ಈ ಕೃಷಿಮೇಳದಲ್ಲಿ, ಕೆ.ವಿ.ಕೆ. ಯ ವಿಜ್ಞಾನಿಗಳು ಕೀಟ ಮತ್ತು ರೋಗ ಭಾದೆಗೆ ಒಳಗಾಗಿರುವ 50 ಕ್ಕೂ ಹೆಚ್ಚು ಕೃಷಿ ಮತ್ತು ತೋಟಗಾರಿಕೆ ಮಾದರಿಗಳನ್ನು ಪತ್ತೆಹಚ್ಚಿದರು ಮತ್ತು ನಿರ್ವಹಣಾ ಕ್ರಮಗಳನ್ನು ಶಿಫಾರಸು ಮಾಡಿದರು. ಈ ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

# ನೈಸರ್ಗಿಕ ಕೃಷಿ ಕುರಿತು ಕೃಷಿ ಸಖಿಯರಿಗೆ ತರಬೇತಿ ಕಾರ್ಯಕ್ರಮ






ಕೇಂದ್ರದಲ್ಲಿ ದಿನಾಂಕ 25–03–2024 ರಿಂದ 29–03–2024 ರವರೆಗೆ ಮ್ಯಾನೇಜ್ ಹೈದರಾಬಾದ್ ಮತ್ತು ಸಂಜೀವಿನಿ, ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ಕೃಷಿ ಸಖಿಗಳಿಗೆ ನೈಸರ್ಗಿಕ ಕೃಷಿ ಕುರಿತು 05 ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ತಿಪಟೂರು ಗ್ರಾಮಾಂತರ ವೃತ್ತ ನಿರೀಕ್ಷಕರಾದ ಶ್ರೀ ಸಿದ್ದರಾಮೇಶ್ವರ ಅವರು ಉದ್ಘಾಟಿಸಿ ಪರಿಸರ ಸ್ನೇಹಿ ನೈಸರ್ಗಿಕ ಬೇಸಾಯ ಕುರಿತು ಮಾತನಾಡಿದರು. ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ.ವಿ.ಗೋವಿಂದ ಗೌಡ ಅವರು ಜೈವಿಕ ನೈಸರ್ಗಿಕ ಒಳಹರಿವುಗಳನ್ನು ಬಳಸಿಕೊಂಡು ಫಲವತ್ತಾಗದ ಮತ್ತು ರಾಸಾಯನಿಕ ಅನ್ವಯಿಸಿದ ಭೂಮಿಯನ್ನು ಫಲವತ್ತಾದ ಭೂಮಿಯಾಗಿ ಪರಿವರ್ತಿಸುವ ಹಂತಗಳನ್ನು ವಿವರಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಕೆವಿಕೆ ತಿಪಟೂರಿನ ಸಂಪನ್ಮೂಲ ವ್ಯಕ್ತಿಗಳು ಮತ್ತು ಚಾಂಪಿಯನ್ ರೈತರು ನೈಸರ್ಗಿಕ ಕೃಷಿ ಪರಿಕಲ್ಪನೆ ಮತ್ತು ಅದರ ಪರಿಸರ ವ್ಯವಸ್ಥೆ, ಮಣ್ಣಿನ ಆರೋಗ್ಯ ನಿರ್ವಹಣೆ, ಜೈವಿಕ ಒಳಹರಿವು ತಯಾರಿಕೆ, ಕೃಷಿ ವ್ಯವಸ್ಥೆ ಮತ್ತು ಬೀಜ ವ್ಯವಸ್ಥೆ, ಜಲ ಸಂರಕ್ಷಣೆ ಪದ್ಧತಿಗಳು, ಐಎಫ್ಎಸ್ ವ್ಯವಸ್ಥೆ, ಬೆಳೆ ಮತ್ತು ಜಾನುವಾರುಗಳ ಕುರಿತು ಉಪನ್ಯಾಸ ನೀಡಿದರು. ಈ 05 ದಿನಗಳ ಕಾರ್ಯಕ್ರಮದಲ್ಲಿ ಮಾದರಿ, ವಿಸ್ತರಣೆ ವಿಧಾನ, ನೈಸರ್ಗಿಕ ಉತ್ಪನ್ನ ಪ್ರಮಾಣೀಕರಣ, ಸಂಪರ್ಕಗಳು ಇತ್ಯಾದಿ. ತುಮಕೂರು ಜಿಲ್ಲೆಯ 10 ತಾಲ್ಲೂಕುಗಳಿಂದ ಒಟ್ಟು 36 ಕೃಷಿ ಸಖಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಯೋಜನ ಪಡೆದರು.

# ತರಬೇತಿ ಕಾರ್ಯಕ್ರಮಗಳು

## ಒಳ ಅವರಣ ತರಬೇತಿಗಳು

| ಕ್ರ.ಸಂ. | ಒಳ ಅವರಣ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|
| 1 | ರೈತ ವಿಜ್ಞಾನಿಗಳ ಸಂವಾದ | 23/01/2024 | 25 |
| 2 | ತೋಟಗಾರಿಕೆ ಬೆಳೆಗಳಲ್ಲಿ ಇತ್ತೀಚಿನ ತಂತ್ರಜ್ಞಾನಗಳು | 2/01/2024 | 52 |
| 3 | ತೋಟಗಾರಿಕೆ ಬೆಳೆಗಳಲ್ಲಿ ಜೇನು ಸಾಕಣೆಯ ಪಾತ್ರ | 23/02/2024 | 102 |
| 4 | ಸುಣ್ಣದಲ್ಲಿ ವೈಜ್ಞಾನಿಕ ಕೃಷಿ ಮತ್ತು ಸಸ್ಯ ಸಂರಕ್ಷಣಾ ಕ್ರಮಗಳು | 28/02/2024 | 43 |
| 5 | ಅಲಂಕಾರಿಕ ಸಸ್ಯ ಪ್ರಸರಣ ಮತ್ತು ಸುಂದರೀಕರಣ | 15/02/2024 | 30 |

## ಹೊರ ಅವರಣ ತರಬೇತಿಗಳು

| ಕ್ರ.ಸಂ. | ಹೊರಾವರಣ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ತೊಗರಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ | ಹಂದನಕೆರೆ | 09/01/2024 | 39 |
| 2 | ಅಡಿಕೆ ಸಿಪ್ಪೆಯಿಂದ ಕಾಂಪೋಸ್ಟ್ ತಯಾರಿಕೆ | ಪರುವಗೊಂಡನಹಳ್ಳಿ | 06/01/2024 | 20 |
| 3 | ಬಾಳೆಯಲ್ಲಿ ಸಮಗ್ರ ಪೋಷಕಾಂಶ ಮತ್ತು ನೀರಿನ ನಿರ್ವಹಣೆ | ಬೊಮ್ಮರಸನಹಳ್ಳಿ | 12/01/2024 | 25 |
| 4 | ವೈಜ್ಞಾನಿಕ ತೆಂಗಿನ ಉತ್ಪಾದನೆ ಮತ್ತು ಸಸ್ಯ ಸಂರಕ್ಷಣೆ | ಚಿಕ್ಕಾಪುರ | 13/01/2024 | 42 |
| 5 | ಕೇರ ಸುರಕ್ಷಾ ಕುರಿತು ಜಾಗೃತಿ ಕಾರ್ಯಕ್ರಮ | ಚಿಕ್ಕಾಪುರ | 22/01/2024 | 116 |
| 6 | ಹುಣಸೆ ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳು | ಸಾರ್ಥವಳ್ಳಿ | 10/02/2024 | 32 |
| 7 | ತೆಂಗಿನ ಮೌಲ್ಯವರ್ಧಿತ ಉತ್ಪನ್ನಗಳ ಪ್ಯಾಕಿಂಗ್, ಲೇಬಲ್ ಮತ್ತು ಬ್ರ್ಯಾಂಡಿಂಗ್ ಕುರಿತು ತರಬೇತಿ ಕಾರ್ಯಕ್ರಮ | ಪರುವಗೊಂಡನಹಳ್ಳಿ | 17/02/2024 | 30 |
| 8 | ಗ್ರಾಮ ದತ್ತು ಕಾರ್ಯಕ್ರಮದ ಅಡಿಯಲ್ಲಿ ಹುಣಸೆ ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳ ಪ್ಯಾಕಿಂಗ್, ಲೇಬಲ್ ಮತ್ತು ಬ್ರ್ಯಾಂಡಿಂಗ್ ಕುರಿತು ತರಬೇತಿ ಕಾರ್ಯಕ್ರಮ | ತಡಸೂರು | 27/02/2024 | 30 |
| 9 | ನೈಸರ್ಗಿಕ ಕೃಷಿ | ಚಿ.ನಾ. ಹಳ್ಳಿ | 13/03/2024 | 45 |

## ಪ್ರಾಯೋಜಿತ ತರಬೇತಿಗಳು

| ಕ್ರ.ಸಂ. | ವಿಷಯ | ದಿನಾಂಕ | ಒಟ್ಟು |
|---|---|---|---|
| 1 | ಕೃಷಿ ಉಪಕರಣಗಳ ದುರಸ್ತಿ ಮತ್ತು ನಿರ್ವಹಣೆ | 04/03/2024 ರಿಂದ 09/03/2024 ರವರೆಗೆ | 15 |
| 2 | ಕೃಷಿ ಸಖಿ ತರಬೇತಿ | 25/03/2024 ರಿಂದ 29/03/2024 ರವರೆಗೆ | 36 |

## ಪ್ರಮುಖ ದಿನಗಳು / ಕಾರ್ಯಕ್ರಮಗಳು ಹಾಗೂ ಕ್ಷೇತ್ರೋತ್ಸವಗಳು

| ಕ್ರ.ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಮಳೆಯಾಶ್ರಿತ ತೊಗರಿ ತಳಿಯ ಕ್ಷೇತ್ರೋತ್ಸವ | ಇಪ್ಪಾಡಿ | 03/01/2024 | 28 |
| 2 | ಎರಡು ಬೆಳೆ ಪದ್ಧತಿಯಲ್ಲಿ (ಗೋವಿನ ಜೋಳ – ರಾಗಿ) ಕ್ಷೇತ್ರೋತ್ಸವ | ಬಂದ್ರೆಹಳ್ಳಿ | 09/01/2024 | 25 |
| 3 | ತೆಂಗು ಕುರಿತು ಜಿಲ್ಲಾ ಮಟ್ಟದ ಕಾರ್ಯಾಗಾರ | ಹಿರೇಡೊಂಕನಹಳ್ಳಿ | 12/03/2024 | 153 |

## ಪದ್ದತಿ ಪ್ರಾತ್ಯಕ್ಷಿಕೆ

| ಕ್ರ.ಸಂ. | ದಿನಾಂಕ | ವಿಷಯ | ಸ್ಥಳ | ಒಟ್ಟು |
|---|---|---|---|---|
| 1 | 04/01/2024 | ಮಾವಿನ ಬೆಳೆಯಲ್ಲಿ ಮಾವು ಸ್ಪೇಷಲ್ ಸಿಂಪರಣೆ ಮತ್ತು ಹಣ್ಣಿನ ನೋಣದ ನಿರ್ವಹಣೆಗೆ ಮೋಹಕ ಬಲೆ ಬಳಕೆ | ಇಪ್ಪಾಡಿ | 25 |
| 2 | 09/01/2024 | ತೊಗರಿಯಲ್ಲಿ ಮೋಹಕ ಬಲೆ ಅಳವಡಿಕೆ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ | ಹಂದನಕೆರೆ | 15 |
| 3 | 07/03/2024 | ಜೀವಾಮೃತ ತಯಾರಿಕೆ | ಕೆ.ವಿ.ಕೆ., ಕೊನೇಹಳ್ಳಿ | 36 |
| 4 | 07/03/2024 | ಬೀಜಾಮೃತ ತಯಾರಿಕೆ | ಕೆ.ವಿ.ಕೆ., ಕೊನೇಹಳ್ಳಿ | 36 |

## ರೇಡಿಯೋ ಕಾರ್ಯಕ್ರಮ

| ಕ್ರ. ಸಂ. | ಪ್ರಸಾರಗೊಂಡ ದಿನಾಂಕ | ವಿಷಯ |
|---|---|---|
| 1. | 03/01/2024 | ಚಿಕ್ಕೋನ್ನವಳ್ಳಿಯಲ್ಲಿ ಗ್ರಾಮ ದತ್ತು ಸ್ವೀಕಾರದ ಪರಿಣಾಮ |

## ದೂರದರ್ಶನ ಕಾರ್ಯಕ್ರಮ

| ಕ್ರ.ಸಂ. | ವಿಷಯ | ಪ್ರಸಾರಗೊಂಡ ದಿನಾಂಕ |
|---|---|---|
| 1 | ತೊಗರಿ ಬೆಳೆಯ ಪ್ರಾಮುಖ್ಯತೆ, ಮಣ್ಣಿನ ಹವಾಮಾನದ ಅವಶ್ಯಕತೆ ಮತ್ತು ಬೀಜ ಸಂಸ್ಕರಣೆ | 05/01/2024 |
| 2 | ತೊಗರಿಯಲ್ಲಿ ಕೀಟ ಮತ್ತು ರೋಗ ನಿರ್ವಹಣೆ | 06/01/2024 |


## ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು:

**ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,**
**ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ,**
**ತಿಪಟೂರು, ತುಮಕೂರು ಜಿಲ್ಲೆ**